"ಉಗ್ರಾಣದಲ್ಲಿರೋದು ಬೇಡವಾದ ವಸ್ತುಗಳು. ಅದನ್ನು ಹೊರಗಡೆ ಇಡಬಹುದು." ಬೋಪಯ್ಯ ಸಮರ್ಥಿಸಿದ.

ಅದನ್ನು ಕೇಳಿ ಆಕೆಯ ಮೊಗ ವಿವರ್ಣವಾಯಿತು. ಚಕ್ಕನೆ ಮೇಜಿನ ಮೇಲಿದ್ದ ಕೈಚೀಲ ಎತ್ತಿಕೊಂಡು, ವೇಗವಾಗಿ ಕೋಣೆಯಿಂದ ಹೊರ ಹೋದಳು.

"ಗಂಡನಲ್ಲಿ ದೂರಲು ಹೋಗಿದ್ದಾಳೆಯೇ?" ನಾನು ವಿಚಾರಿಸಿದೆ.

"ಇರಲಾರದು. ಇವ್ರಿಗೆ ನೂರೆಂಟು ವ್ಯವಹಾರ ಉಂಟು. ಎಷ್ಟು ದುಡ್ಡು ಮಾಡ್ತಾಳೆ ಅಂತ ಗೊತ್ತಿಲ್ಲ. ಆದ್ರೆ ಯಾವಾಗ್ಲೂ ಹೊಸ ವಸ್ತು ಖರೀದಿಸ್ತಾ ಇರ್ತಾಳೆ. ಗಂಡ ಸೋಮಾರಿಯಾದರೆ, ಯಾವ ಹೆಂಡ್ತಿ ಸಹಿಸ್ಕೋತಾಳೆ."

ನಾವು ಕೋಣೆಯಲ್ಲಿ ತಪಾಸಣೆ ಮುಂದುವರೆಸಿದೆವು. ಎಲ್ಲೂ ಕೀಲಿ ಕೈ ಕಾಣಲಿಲ್ಲ. ನಂತರ ನಾವು ಕಾರಿಡಾರ್ ದಾಟಿ ಇನ್ನೊಂದು ಪಕ್ಕಕ್ಕೆ ಬಂದೆವು. ಅಲ್ಲಿ ಅಡುಗೆಕೋಣೆ. ಅದಕ್ಕೆ ಒತ್ತಿಕೊಂಡು ಹಜಾರವಿತ್ತು. ಪೊನ್ನು ಕಾಫಿ ಹಿಡಿದು ಸಿದ್ಧನಾಗಿದ್ದ. ಕಾಫಿ ಕುಡಿಯುವಾಗಲೂ ನನ್ನ ಕಣ್ಣುಗಳು ಅಲ್ಲೆಲ್ಲಾ ಕೀಲಿ ಕೈಗಳನ್ನು ಅರಸುತ್ತಿದ್ದವು. ಅಲ್ಲೇ ಹಿಂಭಾಗದಲ್ಲಿ ಬಚ್ಚಲು ಮನೆ, ಶೌಚಾಲಯವಿದೆ ಎಂದು ಬೋಪಯ್ಯ ಹೇಳಿದ.

ಉಪ್ಪರಿಗೆಯಲ್ಲಿದ್ದ ಮೂರು ಕೋಣೆಗಳಲ್ಲಿ ಒಂದು ಚೆನ್ನಪ್ಪನದ್ದಂತೆ. ನಾವು ಮೆಟ್ಟಿಲು ಹತ್ತುವಾಗ, ಚೆನ್ನಪ್ಪ ದುಡುದುಡನೆ ಮೆಟ್ಟಿಲಿಳಿದು ಬಂದ. ಚೆನ್ನಪ್ಪನ ಹೆಂಡತಿ ಸವಿ ನಮ್ಮನ್ನು ಕಂಡು ಮುಖ ಕಿವಿಚಿದಳು. ಪ್ರಾಯಶಃ ಚೆನ್ನಪ್ಪ ನಮ್ಮ ಉದ್ದೇಶದ ಬಗ್ಗೆ ಉಸುರಿರಬೇಕು.

